**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ, ಕುಣಿಗಲ್**

**ಸಿ.ಸಿ.1035/2019**

ಸಾಕ್ಷಿದಾರರ ಹೆಸರು : ಡಾ.ಮಂಜುನಾಥ ಸ್ಮಾರಣ್ ಎಸ್.

ತಂದೆಯ ಹೆಸರು : ಲೇಟ್ ಸನತ್ ಕುಮಾರ್ ಶಾಸ್ತ್ರಿ

ವಯಸ್ಸು : 47 ವರ್ಷ

ಉದ್ಯೋಗ : ವೈದ್ಯಾಧಿಕಾರಿ, ಬೇಲೂರು ಸರ್ಕಾರಿ ಆಸ್ಪತ್ರೆ

ವಾಸ : ಬೇಲೂರು.

**ಸಾಕ್ಷಿಯನ್ನು ದಿನಾಂಕ:16.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನಾನು 2012 ರಿಂದ 2025 ರವರೆಗೆ ಕುಣಿಗಲ್ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 23.07.2019 ರಂದು ಸುಮಾರು ಬೆಳಿಗ್ಗೆ 7.45 ರ ಸಮಯದಲ್ಲಿ ಬಸ್ ನಿಲ್ದಾಣದ ವೃತ್ತದಲ್ಲಿ ಆದ ಹಲ್ಲೆಯ ಹಿನ್ನಲೆಯೊಂದಿಗೆ ಚಾಸಾ.1 ರವರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ನಾನು 8.10 ಗಂಟೆಯ ಸಮಯದಲ್ಲಿ ಪರೀಕ್ಷಿಸಿದಾಗ ಎಡಭಾಗದ ಕೆನ್ನೆಯಲ್ಲಿ ನೋವು ಎಂದು ಹೇಳಿದರು, ಬಲಗಾಲಿನ ಮೇಲೆ ನೋವು ಎಂದು ಹೇಳಿದರು, ಎಡ ಭುಜದಲ್ಲಿ ನೋವು ಎಂದು ಹೇಳಿದರು. ಈ ಮೇಲಿನ ಗಾಯಗಳಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು. ಚಾಸಾ.1 ರವರಿಗೆ ನಾನು ಮೇಲಿನ ಗಾಯಗಳ

ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ಗುರುತಿಸಿದ ಕಾರಣ, ಸದರಿ ಗಾಯದ ಪ್ರಮಾಣ ಪತ್ರವನ್ನು **ನಿಪಿ.3** ಎಂದು, ಅದರಲ್ಲಿರುವ ತನ್ನ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃಆರೋಪಿ ಪರ ಶ್ರೀ.ಕೆ ಎನ್ ಎ ವಕೀಲರಿಂದಃ**

ಚಾಸಾ.1 ರವರು ಚಾಸಾ.2 ರವರ ಜೊತೆ ನಮ್ಮ ಆಸ್ಪತ್ರೆಗೆ ಬಂದಿದ್ದರು. ಗಾಯಾಳುವಿಗೆ ಚಿಕಿತ್ಸೆ ನೀಡಿದ ಕುರಿತು ಠಾಣೆಗೆ ಲಿಖಿತವಾಗಿ ಮಾಹಿತಿ ನೀಡದೇ ದೂರವಾಣಿ ಮೂಲಕ ತಿಳಿಸಲಾಗಿತ್ತು. ಚಾಸಾ.1 ರವರಿಗೆ ಮೂಳೆ ತಜ್ಞರ ಬಳಿ ಸಲಹೆ ಪಡೆಯಲು ಸೂಚಿಸಲಾಗಿತ್ತು. ಚಾಸಾ.1 ರವರು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ. ನನಗೆ ಯಾವುದೇ ಮೂಳೆ ತಜ್ಞರಿಂದ ವರದಿ ಬಂದಿರುವುದಿಲ್ಲ. ಚಾಸಾ.1 ರವರು ಬೇರೆಡೆ ಚಿಕಿತ್ಸೆ ಪಡೆದ ಕುರಿತು ನನಗೆ ವರದಿ ನೀಡಿರುವುದಿಲ್ಲ. ನಿಪಿ.3ರಲ್ಲಿ ನಮೂದಾಗಿರುವ ಗಾಯ ಸೈಕಲ್ ನಿಂದ ಜಲ್ಲಿಕಲ್ಲಿನ ರಸ್ತೆ ಯ ಮೇಲೆ ಬಿದ್ದರೆ ಆಗಬಹುದು ಎಂದರೆ ಸರಿ.

2. ಆ ದಿನ ನನ್ನ ಕರ್ತವ್ಯ ಹಿಂದಿನ ದಿನ 4.00 ಗಂಟೆಯಿಂದ ಆರಂಭವಾಗಿ ಬೆಳಿಗ್ಗೆ 11.00 ಗಂಟೆಯವರೆಗೆ ಇತ್ತು. ಎಂ ಎಲ್ಸಿ ಎಕ್ಸ್ ಟ್ರಾಕ್ಟ್ ಅನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ನಿಪಿ.3ನ್ನು ನೀಡಲು ನಿವೇದನೆ ಬಂದಿತ್ತು. ಚಾಸಾ.1 ರವರು ನನ್ನ ಕರ್ತವ್ಯದ ವೇಳೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳು ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇದೆ .**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .**
**ಕುಣಿಗಲ್**